# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಮಯದ ಅಪರಾಧಗಳ ವಿಶೇಷ ನ್ಯಾಯಾಲಯ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಜಿಲ್ಲೆ, ರಾಯಚೂರು.

ಸ್ಪೇಷಲ್ .ಸಿ **ಸಂಖ್ಯೆಃ 367/2020**

ಪ್ರಾ.ಸಾ-02

ಚಾ.ಸಾ-02

ಸಾಕ್ಷಿದಾರರು ಕ್ರಮವಾಗಿ ಪ್ರಮಾಣ ವಚನ ಮಾಡಿದರು ದಿನಾಂಕ 06-12-2021.

| | |
|---|---|
| ಸಾಕ್ಷಿದಾರರ ಹೆಸರು | ಶಿಲ್ಪಾ |
| ಗಂಡನ ಹೆಸರು | ಹಂಪಯ್ಯಸ್ವಾಮಿ |
| ವಯಸ್ಸು | 28 |
| ಉದ್ಯೋಗ | ಮನೆಕೆಲಸ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ ಃ ಸಾರ್ವಜನಿಕ ಅಭಿಯೋಜಕ ರಾದ ಮಂಜುನಾಥ ರವರಿಂದ .**

ನನಗೆ ಚಾ.ಸಾ-1 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಚಾ.ಸಾ-3 ರಿಂದ 7 ರವರ ಪರಿಚಯ ಇದೆ. ಆರೋಪಿತರು ಊರಲ್ಲಿ ಅವರ ಜಾಗೆಯಲ್ಲಿ ಮನೆ ಕಟ್ಟುತ್ತಿದ್ದರು. ಅವರ ಮನೆಯ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಂದು ಬೋರ್ ಇತ್ತು. ಆ ಬೋರವೆಲ್ ನ್ನು ಮನೆಯ ಒಳಗೆ ಮಾಡಿಕೊಂಡು ಮನೆ ಕಟ್ಟುತ್ತಿದ್ದರು. ನಾನು ಹಾಗೂ ನಮ್ಮ ಓಣಿಯಲ್ಲಿರುವ ಚಾ.ಸಾ-1, 3 ರಿಂದ 7 ರವರು ಹೋಗಿ ಆರೋಪಿತರಿಗೆ ಇದು ಸರ್ಕಾರಿ ಬೋರ್ ವೆಲ್ ಅದನ್ನು ಬಿಟ್ಟು ಮನೆ ಕಟ್ಟಿಕೊಳ್ಳಿ ಎಮದು ತಕರಾರು ಮಾಡಿದೆವು, ಆ ಬೋರನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರದವರು ಮಾಡಿಕೊಟ್ಟಿದ್ದು ಎಂದು ಹೇಳಿದೇವು.

2. ದಿನಾಂಕ 25-06-2020 ಆರೋಪಿತರಿಗೆ ನಾವು ಎಲ್ಲರೂ ಸೇರಿ ಅವರಿಗೆ ಬೋರ್ ಬಿಟ್ಟು ಮನೆ ಕಟ್ಟು ಎಂದು ಹೇಳಿದೆವು. ಸಂಜೆ 4-00 ರಿಂದ 5-00 ಕ್ಕೆ ನಮ್ಮ ಮನೆಯ ಕಟ್ಟೆಯ ಮೇಲೆ ನಾನು ಮತ್ತು ಚಾ.ಸಾ-1 ಮಾತನಾಡುತ್ತಾ ಕುಳಿತಿದ್ದೆವು. ಸುಮಾರು 5-00 ಗಂಟೆಗೆ

ಆರೋಪಿತರಿಬ್ಬರೂ ಕೂಡಿ ಬಂದು ಚಾ.ಸಾ-1 ರವರಿಗೆ ಮಾದಿಗ ಸೂಳೆ ನಿನ್ನದೇ ಬಹಳ ಆಗಿದೆ ಎಲ್ಲಾರನ್ನು ಸೇರಿಸಿಕೊಂಡು ತಕರಾರು ಮಾಡುತ್ತಿಯಾ ಎಂದು ಕಟ್ಟೆಯ ಮೇಲೆ ಕುಳಿತಿದ್ದ ಚಾ.ಸಾ-1 ರವರನ್ನು ಕೂದಲು ಹಿಡಿದು ಎಳೆದು ಮಾದಿಗ ಸೂಳೆ ನಿನ್ನನ್ನು ಬಿಡಬಾರದು ಎಂದು ಎಳೆದಾಡಿ ಕೈಯಿಂದ ಬೆನ್ನಿಗೆ, ಹೊಟ್ಟೆಗೆ ಕಾಲಿನಿಂದ ಒದ್ದಿರುತ್ತಾರೆ. ಆಗ ಅವರು ಚೀರಾಡುತ್ತಿದ್ದಾಗ ಅಲ್ಲಿಯೇ ಇದ್ದ ನಾನು ಮತ್ತು ಚಾ.ಸಾ-3 ರಿಂದ 7 ರವರು ಬಿಡಿಸಿದೆವು, ಆಗ ಆರೋಪಿತರು ಅವರಿಗೂ ಸಹ ಬಿಡಿಸಲು ಬಂದರೆ ನಿಮ್ಮನ್ನು ಸಹ ಕೊಲೆ ಮಾಡುವದಾಗಿ ಕೊಲೆ ಬೆದರಿಕೆ ಹಾಕಿದರು. ನಂತರ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ ಎಮ್.ಜೆಡ್.ಪಿ ವಕೀಲರಿಂದ :-</u>**

ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದೇನೆ. ಘಟನೆಯಾದ ಮರುದಿನ ದೂರು ದಾಖಲಿಸಿದ್ದಾರೆ. ನನ್ನ ಮನೆ ಮತ್ತು ಚಾ.ಸಾ-1 ರವರ ಮನೆ ದೇವದುರ್ಗದ ಸರ್ಕಾರಿ ಆಸ್ಪತ್ರೆಯ ಹಿಂದುಗಡೆ ಇದೆ ಎಂದರೆ ಸರಿ. ಸರ್ಕಾರಿ ಆಸ್ಪತ್ರೆ ಎದುರುಗಡೆ ರಸ್ತೆ ಇದೆ, ರಸ್ತೆಯ ಇನ್ನೊಂದು ಬದಿಗೆ ದೇವದುರ್ಗ ಪೋಲಿಸ್ ಠಾಣೆ ಇದೆ ಎಂದರೆ ಸರಿ. ನಮ್ಮ ಮನೆಯಹತ್ತಿರ ಜೋರಾಗಿ ಮಾತನಾಡಿದರೆ ಪೋಲಿಸ್ ಠಾಣೆಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ನಡೆದುಕೊಂಡು ಹೋದರು 3-4 ನಿಮಿಷದಲ್ಲಿ ಠಾಣೆಯನ್ನು ಮುಟ್ಟಬಹುದು ಎಂದರೆ ಸರಿ. ಪೋಲಿಸರು ನನ್ನ ಹೇಳಿಕೆಯನ್ನು ನಮ್ಮ ಮನೆಯ ಹತ್ತಿರ ಪಡೆದುಕೊಂಡಿದ್ದಾರೆ. ಯಾವ ಪೋಲಿಸರ ಬಂದು ನನ್ನ ಹೇಳಿಕೆ ಪಡೆದಿದ್ದಾರೆ ಎಂದು ಹೆಸರು ಹೇಳಲು ನನಗೆ ಗೊತ್ತಿಲ್ಲ. ಘಟನೆಯಾದ 4-5 ದಿನಗಳ ನಂತರ ಪೋಲಿಸರು ನಮ್ಮ ಮನೆಗೆ ಬಂದು ಹೇಳಿಕೆ ಪಡೆದಿದ್ದಾರೆ. ಪೋಲಿಸರು ಒಂದೆಸಾರಿ ನಮ್ಮ ಮನೆಗೆ ಬಂದು ವಿಚಾರ ಮಾಡಿ ಹೇಳಿಕೆ ಪಡೆದುಕೊಂಡು ಹೋಗಿದ್ದಾರೆ.

**2.** ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿನಾಂಕ **25-06-2020** ಸಂಜೆ **4-00** ಕ್ಕೆ ಆರೋಪಿತರು ತಮ್ಮ ಮನೆ ಕಟ್ಟುವ ಜಾಗದಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ. ಆಗ ನಾವು ಅವರಿಗೆ ಬೋರ್ ಬಿಟ್ಟು ಮನೆ ಕಟ್ಟು ಎಂದು ಹೇಳಿದ್ದಕ್ಕೆ ನೀನು ಯಾವಳಲೇ ಮಾದಿಗ ಸೂಳೆ ಮಗಳೆ ನಿನ್ನ ಕೆಲಸ ಏನು ಇದ ಅದಷ್ಟೆ ಮಾಡು ಎಂದರು ಎಂದು ಚಾ.ಸಾ-1 ರವರಿಗೆ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನನ್ನನ್ನು ಚಾ.ಸಾ-1 ರವರು ಕರೆದುಕಂಡು ಬಂದಿದ್ದಾರೆ ಎಂದರೆ ಸರಿ. ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಚಾ.ಸಾ-1 ನನಗೆ ಹೇಳಿ ಕೊಟ್ಟಿದ್ದಾರೆ ಎಂದರೆ

ಸರಿಯಲ್ಲ. ನಂತರ ನಾನು ಮತ್ತು ಚಾ.ಸಾ-1 ನಮ್ಮ ಮನೆಯ ಕಟ್ಟೆಯ ಮೇಲೆ ನಾನು ಮತ್ತು ಚಾ.ಸಾ-2 ಮಾತನಾಡುತ್ತಾ ಕುಳಿತಿದ್ದೆವು. ಸುಮಾರು 5-00 ಗಂಟೆಗೆ ಆರೋಪಿತರಿಬ್ಬರೂ ಕೂಡಿ ಬಂದು ಕಟ್ಟೆಯ ಮೇಲೆ ಕುಳಿತಿದ್ದ ಚಾ.ಸಾ-1 ರವರನ್ನು ಕೂದಲು ಹಿಡಿದು ಎಳೆದು ಮಾದಿಗ ಸೂಳೆ ನಿನ್ನನ್ನು ಬಿಡಬಾರದು ಎಂದು ಎಳೆದಾಡಿ ಕೈಯಿಂದ ಬೆನ್ನಿಗೆ, ಹೊಟ್ಟೆಗೆ ಕಾಲಿನಿಂದ ಒದ್ದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆಯವರ ಜೊತೆಗೆ ನಾನು ಜಗಳವನ್ನು ಬಿಡಿಸಿದ್ದೇನೆ ಎಂದು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು)
ಓ. ಹೇ. ಕೇ. ಸರಿ ಇದೆ.

1ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ರಾಯಚೂರು.